

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಬಳಿಯಿರುವ ನವವೃಂದಾವನದ ನೋಟ
ಪ್ರಜಾವಾಣಿ ಚಿತ್ರ

# ಗುರುಗಳ ಸನ್ನಿಧಿ ನವವೃಂದಾವನ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗೊಂದಿಯ ಬಳಿ ಇರುವ ನವವೃಂದಾವನ ಪರಮಪುಣ್ಯ ಕ್ಷೇತ್ರವಾಗಿದ್ದು, ಬಹಳ ಮಹತ್ವದ ಧಾರ್ಮಿಕ ನೆಲೆ. ಯಾಕೆಂದರೆ ಕಲಿಯುಗ ಕಾಮಧೇನು, ಕಲ್ಪತರು ಎಂದೇ ಸುಪ್ರಸಿದ್ಧರಾದ ಕರುಣಾಮಯಿ ರಾಘವೇಂದ್ರ ಸ್ವಾಮಿಗಳವರ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರು ವೃಂದಾವನಸ್ಥರಾದ ಪುಣ್ಯ ಕ್ಷೇತ್ರವಿದು.

ರಾಮಾಯಣದಲ್ಲಿ ಬರುವ ಕಿಷ್ಕಿಂಧೆ ಇದೇ ಆನೆಗೊಂದಿ ಪರಿಸರ. ಅಥರ್ವಣ ವೇದ ರಹಸ್ಯದಲ್ಲಿ ಲಕ್ಷ್ಮೀ ಹೃದಯದಲ್ಲಿ ಇದನ್ನು ಶ್ರೀರಂಗ ನಗರ ಎಂದು ಕರೆದಿದ್ದಾರೆ. ಸ್ಕಂದ ಪುರಾಣ, ಹರಿವಂಶ ಪುರಾಣ, ವಾಲ್ಮೀಕಿ ರಾಮಾಯಣಗಳಲ್ಲಿ ಹಸ್ತಿನಾವತಿ, ಗಜಕೋಣ, ಕಿಷ್ಕಿಂಧಾ ನಗರಿ, ಕಿಷ್ಕಿಂಧಾಪುರಿ (ಗಜಗಹ್ವರ) ಎಂದೆಲ್ಲ ಪ್ರಸಿದ್ಧಿಯಾಗಿರುವ ಸ್ಥಳವಿದು. ಇವೆಲ್ಲವೂ ಆನೆಗೊಂದಿಯ ಹಿಂದಿನ ಹೆಸರುಗಳು.

ಪೌರಾಣಿಕವಾಗಿ, ಐತಿಹಾಸಿಕವಾಗಿ, ಧಾರ್ಮಿಕವಾಗಿ ಬಹಳಷ್ಟು ಮಹತ್ವ ಹೊಂದಿರುವ ಕ್ಷೇತ್ರವಿದು. ತುಂಗಭದ್ರಾ ನದಿಯ ದಡದಲ್ಲಿರುವ ಈ ಕ್ಷೇತ್ರವನ್ನು ಕಾಲಾದ್ರಿಪರ್ವತ ಎಂತಲೂ ಕರೆಯುತ್ತಾರೆ. ಒಟ್ಟು ಒಂಬತ್ತು ಜನ ಯತಿಗಳು ನಡುಗಡ್ಡೆಯಲ್ಲಿ ವೃಂದಾವನಸ್ಥರಾಗಿದ್ದಾರೆ. ಜಗತ್ತಿಗೆ ವೃಂದಾವನಗಳ ಪರಿಕಲ್ಪನೆ ಹುಟ್ಟಿದ್ದೇ ನವವೃಂದಾವನದಿಂದ ಎನ್ನುವುದು ಭಕ್ತರ ನಂಬಿಕೆ.

ಇಲ್ಲಿ ಮೊದಲ ವೃಂದಾವನ ಇರುವುದು ಪದ್ಮನಾಭತೀರ್ಥರದ್ದು. ಮಾಧ್ವ ಮಠಕ್ಕೆ ಪರಮಪೂಜ್ಯರಾಗಿದ್ದಾರೆ. ಕ್ರಿ.ಶ. 1263ರಲ್ಲಿ ಶೋಭನಭಟ್ಟರು ಕಾಕತೀಯ ರಾಜಾಶ್ರಯದ ಗೋದಾವರಿ ತೀರದಲ್ಲಿ ವಿದ್ವತ್ ಸಭೆ ಆಯೋಜಿಸಿದ್ದರು. ಸಭೆಗೆ ಎಲ್ಲ ದೇಶಗಳ ಪಂಡಿತರನ್ನು ಆಹ್ವಾನಿಸಲಾಗಿತ್ತು. ಅಲ್ಲಿಗೆ ಮಧ್ವಾಚಾರ್ಯರಿಗೂ ವಿಶೇಷ ಆಹ್ವಾನ ನೀಡಲಾಗಿತ್ತು. ಗೋದಾವರಿ ತೀರದ ವಿದ್ವತ್ ಸಭೆಯಲ್ಲಿ ಶೋಭನಭಟ್ಟರು ಪರಾಜಿತರಾಗಿ ಎಲ್ಲ ಮಂತ್ರಿ ಪದವಿ ಬಿಟ್ಟು ಮಧ್ವಾಚಾರ್ಯರ ಶಿಷ್ಯರಾಗಿ ರಜತಪೀಠಪುರಕ್ಕೆ ಗುರುಗಳ ಜೊತೆ ಬಂದು ಅವರ ಸೇವೆಯಲ್ಲಿ ತೊಡಗಿಕೊಳ್ಳುತ್ತಾರೆ.

ಇವರ ಗುರುಸೇವೆಯನ್ನು ಮೆಚ್ಚಿಕೊಂಡು ಮಧ್ವಾಚಾರ್ಯರು ಶೋಭನಭಟ್ಟರಿಗೆ ಕ್ರಿ.ಶ. 1267ರಲ್ಲಿ ಯತ್ಯಾಶ್ರಮ ನೀಡಿ ತಪ್ತ ಮುದ್ರಾಧಾರಣೆ ಮಾಡಿ ಶ್ರೀಪದ್ಮನಾಭ ತೀರ್ಥರು ಎಂದು ನಾಮಕರಣ ಮಾಡುತ್ತಾರೆ. ಮುಂದೆ ಅವರ ವಿದ್ವತ್ ಪ್ರತಿಭೆ ಹಾಗೂ ಕೀರ್ತಿ ಎಲ್ಲ ಕಡೆ ಹರಡುತ್ತದೆ. ಪದ್ಮನಾಭತೀರ್ಥರ ಪಾಂಡಿತ್ಯವನ್ನು ಜಯತೀರ್ಥರು ಅಪಾರವಾಗಿ ಸ್ತುತಿಸುತ್ತಾರೆ. ಸುಪ್ರಸಿದ್ಧ ಗ್ರಂಥಕರ್ತರಾಗಿ ಏಳು ವರ್ಷಗಳ ಕಾಲ ವೇದಾಂತ ಸಾಮ್ರಾಜ್ಯದಲ್ಲಿ ಮೂಲ ರಾಮರ ಪೂಜೆ ಮಾಡಿಕೊಂಡಿದ್ದು 1326ರಲ್ಲಿ ವೃಂದಾವನಸ್ಥರಾಗುತ್ತಾರೆ.


ಕಲಿಯುಗದ ಕಾಮಧೇನು ರಾಘವೇಂದ್ರ ಸ್ವಾಮಿಗಳಿಗೆ ಯತ್ಯಾಶ್ರಮ ಕೊಟ್ಟು ಜಗತ್ತಿನ ಆಧ್ಯಾತ್ಮ ಲೋಕಕ್ಕೆ ಅವರನ್ನು ಕೊಟ್ಟವರು ಶ್ರೀ ಸುಧೀಂದ್ರ ತೀರ್ಥರು. ರಾಘವೇಂದ್ರ ಸ್ವಾಮಿಗಳ ಪ್ರಭಾವಳಿಯಲ್ಲಿ ಸುಧೀಂದ್ರ ತೀರ್ಥರ ವ್ಯಕ್ತಿತ್ವ, ಮಹಿಮೆ ಹೊರ ಜಗತ್ತಿಗೆ ಅಷ್ಟೊಂದು ವ್ಯಾಪಕವಾಗಿ ತಿಳಿದಿಲ್ಲ. ಅತ್ಯಂತ ತಪೋನಿಧಿಗಳು, ಮಹಾಜ್ಞಾನಿಗಳು ಆದ ಸುಧೀಂದ್ರ ತೀರ್ಥರು ತಮ್ಮ ಗುರುಗಳಾದ ವಿಜಯೀಂದ್ರ ತೀರ್ಥರಿಂದ ಯತ್ಯಾಶ್ರಮ ಸ್ವೀಕರಿಸುತ್ತಾರೆ.

ಮಧ್ವಾಚಾರ್ಯ ಪರಂಪರೆಯ ಕವೀಂದ್ರತೀರ್ಥರು, ವಾಗೀಶ ತೀರ್ಥರು, ರಾಘವೇಂದ್ರಸ್ವಾಮಿ ಮಠದ ಪರಂಪರೆಗೆ ಸೇರಿದವರಾಗಿದ್ದಾರೆ. ಹೀಗೆ ಒಂದೊಂದು ಮಹತ್ವದ ಇತಿಹಾಸ ಹೊಂದಿರುವ ಒಂಬತ್ತು ವೃಂದಾವನಗಳು ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಎನಿಸಿವೆ. ಮಾಧ್ವ ಪರಂಪರೆಯಲ್ಲಿ ಸನ್ಯಾಸಾಶ್ರಮ ಸ್ವೀಕರಿಸುವವರು ನವ ವೃಂದಾವನಕ್ಕೆ ಬಂದು ಆಶೀರ್ವಾದ ಪಡೆಯುವ ರೂಢಿಯಿದೆ. ಕರ್ನಾಟಕದ ದಾಸಸಾಹಿತ್ಯ ಪರಂಪರೆಗೆ ಈ ಕ್ಷೇತ್ರದ ಕೊಡುಗೆ ಅನನ್ಯವಾಗಿದೆ. ರಾಯರ ಮಠದ ಪರಂಪರೆಯ ಜಯತೀರ್ಥರ ವೃಂದಾವನ ಇಲ್ಲಿಯೇ ಇದೆ ಅನ್ನುವ ಚರ್ಚೆ ಇದೆ. ಈ ಕುರಿತು ಇನ್ನಷ್ಟು ಸಂಶೋಧನೆ, ವಿಶ್ಲೇಷಣೆ ಅಗತ್ಯವಿದೆ.

ಸಿದ್ಧಾರೂಢರು ಕೂಡ ಈ ಕ್ಷೇತ್ರಕ್ಕೆ ಬಂದು ಹುಬ್ಬಳ್ಳಿಗೆ ತೆರಳುತ್ತಾರೆ ಎನ್ನುವುದರ ಬಗ್ಗೆ ಉಲ್ಲೇಖವಿದೆ. ಕರ್ನಾಟಕ ಏಕೀಕರಣ ಚಳವಳಿಗೂ ಮೊದಲು ಆಲೂರು ವೆಂಕಟರಾಯರು ನವವೃಂದಾವನ ಮತ್ತು ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದಕ್ಷಿಣ ಬದರಿ ಎನ್ನುವ ಖ್ಯಾತಿಯೂ ಈ ಕ್ಷೇತ್ರಕ್ಕಿದೆ.

ಮಂತ್ರಾಲಯದ ರಾಯರ ಮಠದ ಪರಂಪರೆಯ ಬಹುತೇಕ ಸನ್ಯಾಸಿಗಳು, ಯತಿಗಳು, ತಪೋನಿಧಿಗಳು ನವವೃಂದಾವನದಲ್ಲಿ ವೃಂದಾವನಸ್ಥರಾಗಿದ್ದಾರೆ. ಈ ಕ್ಷೇತ್ರ ಮಂತ್ರಾಲಯದ ಮಠಕ್ಕೆ ನಿಕಟವಾಗಿದೆ. ಇವೆಲ್ಲ ಕಾರಣಕ್ಕಾಗಿ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳದಿಂದ ಭಕ್ತರು ಬಂದು ತುಂಗಭದ್ರಾ ನದಿಯಲ್ಲಿ ಮಿಂದು ನವ ವೃಂದಾವನದಲ್ಲಿ ಒಂಬತ್ತು ಜನ ಯತಿಗಳ ದರ್ಶನ ಪಡೆಯುತ್ತಾರೆ. ಮಂತ್ರಾಲಯಕ್ಕೂ ಹಾಗೂ ನವವೃಂದಾವನಕ್ಕೆ ಕರಳುಬಳ್ಳಿಯ ಸಂಬಂಧವಿದೆ.

■ ಗುಂಡೂರು ಪವನಕುಮಾರ್



ಕಾವಲು ಗೋಪುರದಿಂದ ನವವೃಂದಾವನಗಳ ವೀಕ್ಷಣೆ
ಪ್ರಜಾವಾಣಿ ಚಿತ್ರ